ದಿನಾಂಕಃ 26.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ಪ್ರತಿವಾದಿ-17 ರಿಂದ 19 ರವರ ಪರ ವಕೀಲರಿಂದ :</u>**

ನಮ್ಮ ತಂದೆಗೆ ಒಟ್ಟು 4 ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು. 4 ಜನ ಹೆಣ್ಣು ಮಕ್ಕಳ ಹೆಸರು ರತ್ನಮ್ಮ, ಪ್ರೇಮ, ಶಾಂತ ಯಾನೆ ಮಂಜುಳ ಹಾಗೂ ಭಾರತಿ ಆಗಿರುತ್ತದೆ. ಪ್ರತಿವಾದಿ-17 ರಿಂದ 19 ರವರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಮ್ಮ ವಕೀಲರು ತಿಳಿದುಕೊಂಡಿರುತ್ತಾರೆ. ನನ್ನ ತಂದೆಯವರು ದಾವಾ ಅನುಸೂಚಿಯ 1 ಮತ್ತು 7ನೇ ಆಸ್ತಿಗಳನ್ನು 17ನೇ ಪ್ರತಿವಾದಿಯ ತಂದೆಯಿಂದ ಖರೀದಿಸಿದ್ದರು, ನನ್ನ ತಾಯಿಯವರು ಸದರಿ ಆಸ್ತಿಯನ್ನು 17ನೇ ಪ್ರತಿವಾದಿಗೆ ಮಾರಿರುತ್ತಾರೆ.

**2.** ನನ್ನ ತಂದೆಗೆ ಸೇರಿದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ, ನಾನು ಅನಕ್ಷರಸ್ಥೆ, ಎಲ್ಲವನ್ನು ಸೇರಿಸಿರುತ್ತೇನೆ ಎನ್ನುತ್ತಾರೆ. ಪ್ರತಿವಾದ ಪತ್ರದಲ್ಲಿ ನನ್ನ ತಂದೆಗೆ ಸೇರಿದ ಯಾವ ಯಾವ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದು ತಿಳಿಸಲಾಗಿದೆ ಎಂದರೆ ಎಲ್ಲಾ ಆಸ್ತಿಗಳನ್ನು ಸೇರಿಸಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಗಳ ಸರ್ವೆ ನಂಬರ್ ಗಳನ್ನು ನನಗೆ ಹೇಳಲಾಗುವುದಿಲ್ಲ.

**3.** ದಾವಾ ಅನುಸೂಚಿಯ 1ನೇ ಆಸ್ತಿಯನ್ನು 1978 ರಲ್ಲಿ ನನ್ನ ತಾಯಿಯವರು 17ನೇ ಪ್ರತಿವಾದಿಯ ತಂದೆಯಿಂದ ಖರೀದಿಸಿದ್ದರು, ನಂತರದಲ್ಲಿ

2006 ರಲ್ಲಿ ನನ್ನ ತಾಯಿಯವರಿಂದ ಸದರಿ ಆಸ್ತಿಯನ್ನು 17ನೇ ಪ್ರತಿವಾದಿಯು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಯಲ್ಲೂ ಸಹ ನನಗೆ ಭಾಗ ಬರಬೇಕು ಎನ್ನುತ್ತಾರೆ.

**4.** ದಾವಾ ಅನುಸೂಚಿಯ 7ನೇ ಆಸ್ತಿಯನ್ನು 1968 ರಲ್ಲಿ ನನ್ನ ತಂದೆಯವರು 17ನೇ ಪ್ರತಿವಾದಿಯ ತಾತ ಹಾಗೂ ತಂದೆಯಿಂದ ಖರೀದಿಸಿದ್ದರು, ಸದರಿ ಆಸ್ತಿಯು 2003 ರಲ್ಲಿ ನಮ್ಮ ಕುಟುಂಬದ ವಿಭಾಗದಲ್ಲಿ ನನ್ನ ಅಣ್ಣ ನಿಂಗೇಗೌಡರ ಭಾಗಕ್ಕೆ ಹೋಗಿದ್ದು, 2008 ರಲ್ಲಿ ನಿಂಗೇಗೌಡರ ಪತ್ನಿ ಸುಶೀಲಮ್ಮ ಮತ್ತು ಕುಟುಂಬದವರು ಸದರಿ ಆಸ್ತಿಯನ್ನು 17ನೇ ಪ್ರತಿವಾದಿಗೆ ಮಾರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸದರಿ ಮಾರಾಟದ ಬಗ್ಗೆ ಮಾಹಿತಿ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5.** ನಿಪಿ-186 ರಂತೆ ನಾನು ವಿಭಾಗ ಪತ್ರ ಹಾಜರುಪಡಿಸಿರುತ್ತೇನೆಂದರೆ ಸರಿ. ಸದರಿ ಪತ್ರದ ಪ್ರಕಾರ 2003 ರಲ್ಲಿ ನನ್ನ ತಾಯಿ, ನನ್ನ ಅಣ್ಣನ ಪತ್ನಿ ಸುಶೀಲ, ನನ್ನ ಸಹೋದರಿ ಭಾರತಿ ಹಾಗೂ ನನ್ನ ಅಣ್ಣ ನಂಜೇಗೌಡರವರು ನೋಂದಾಯಿತ ವಿಭಾಗ ಪತ್ರದ ಮೂಲಕ ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರು ನಮ್ಮನ್ನು ಬಿಟ್ಟು ಆ ರೀತಿ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. 2003 ರಲ್ಲಿ ನಾನು ಮದುವೆಯಾಗಿ ಬೇರೆ ಊರಿನಲ್ಲಿದ್ದೆ ಎಂದರೆ ಸರಿ. ಭಾರತೀರವರಿಗೆ ಆ ಸಮಯದಲ್ಲಿ ಮದುವೆಯಾಗಿರಲಿಲ್ಲ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಹಾಗೂ ಕೇಳಿ ತಿಳಿದುಕೊಂಡಿಲ್ಲ. ನನಗೆ ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಸದರಿ 4 ಜನ ಯಾವ ಯಾವ ಆಸ್ತಿಗಳನ್ನು ವಿಭಾಗ ಪತ್ರದ ಮೂಲಕ ಪಡೆದುಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ವಿಭಾಗ ಪತ್ರದ ಮೂಲಕ ನನ್ನ ತಾಯಿಗೆ ಬಂದಂತಹ 1ನೇ ಅನುಸೂಚಿ ಸ್ವತ್ತನ್ನು 17ನೇ ಪ್ರತಿವಾದಿಗೆ ಮಾರಿರುತ್ತಾರೆ ಎಂದರೆ ಅವರಿಗೆ ಹಕ್ಕು ಇರುವುದಿಲ್ಲ. ಸದರಿ ವಿಭಾಗ ಪತ್ರದ ಮೂಲಕ ಸುಶೀಲರವರಿಗೆ ಬಂದಂತಹ 7ನೇ ಅನುಸೂಚಿ ಸ್ವತ್ತನ್ನು 17ನೇ ಪ್ರತಿವಾದಿಗೆ ಮಾರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಅವರು ನನ್ನನ್ನು ಕೇಳಿ ಖರೀದಿಸಿರುವುದಿಲ್ಲ.

**6.** ಸುಗ್ಗನಹಳ್ಳಿ ಗ್ರಾಮದ ಸರ್ವೆ ನಂಬರ್ 15 ಹಾಗೂ ದೊಡ್ಡಂಕನಹಳ್ಳಿ ಗ್ರಾಮದ ಸರ್ವೆ ನಂಬರ್ 98/3 ಮತ್ತು 45/2 ರ ಆಸ್ತಿಗಳು ನನ್ನ ಕುಟುಂಬದ ಆಸ್ತಿಗಳು ಎಂದರೆ ಸರಿ. ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಸಹೋದರಿ ಭಾರತೀರವರಿಂದ ಸುಗ್ಗನಹಳ್ಳಿ ಗ್ರಾಮದ ಸರ್ವೆ ನಂಬರ್ 15 ಹಾಗೂ ದೊಡ್ಡಂಕನಹಳ್ಳಿ ಗ್ರಾಮದ ಸರ್ವೆ ನಂಬರ್ 98/3 ರ ಆಸ್ತಿಗಳನ್ನು ದಿನಾಂಕಃ 10.06.2005 ರಂದು ನಾನು ಖರೀದಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರಿಗೆ ಯಾರೂ ಮದುವೆ ಮಾಡಿರಲಿಲ್ಲ, ಆ ಕಾರಣದಿಂದ ನಾವು ಅವರಿಗೆ ಖರೀದಿಸಿ, ಅವರಿಗೆ ಹಣ ಕೊಟ್ಟು, ಅವರಿಗೆ ಮದುವೆ ಮಾಡಿರುತ್ತೇವೆ ಎನ್ನುತ್ತಾರೆ. ನಾನು ಸದರಿ ಆಸ್ತಿಗಳನ್ನು ಖರೀದಿಸಿದ ಕ್ರಯಪತ್ರದಲ್ಲಿ ಸದರಿ ಆಸ್ತಿಗಳು ಭಾರತೀರವರಿಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿ.

***ಈ ಹಂತದಲ್ಲಿ ಪ್ರತಿವಾದಿ-17 ರಿಂದ 19 ರವರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**